SRI B. SUBBAYA SHETTY.—I have never refused anybody to come and talk to me. I don't know why the Hon. Leader of the Opposition is harping on that point again. I have made my points very clear. I have not left any doubt. I appeal to the patriotism of these teachers and their duties towards the students.

SRI S. R. BOMMAI.—In protest against the autocratic attitude of the Minister, we stage a walk out.

(The Opposition Members withdraw)

SRI B. SUBBAYYA SHETTY —Now what they have said about the Political motivation is proved beyond all doubts.

(ii) Re: release of grants and loans to the Municipalites particularly to Hassan District.

ಶ್ರೀ ಬಿ. ಚ್. ಲಕ್ಷ್ಮಣಯ್ಯ (ಬೇಲೂರು).—ಹಾಸನ ಜಿಲ್ಲೆಯಲ್ಲಿ ಇರತಕ್ಕ ಪುರಸಭೆಗಳಿಗೆ ಮಾರ್ಚ್ 31ನೇ ತಾರೀಖು ಕಾಂಗ್ರೆಸ್-ಐ ಪಕ್ಷದಿಂದ ಬಂದಿರತಕ್ಕಂಥ ಸದಸ್ಯರುಗಳ ಕ್ಷೇತ್ರದಲ್ಲಿ ಇರತಕ್ಕಂಥ ಮುನಿಸಿಪಾಲಿಟಿಗಳಿಗೆ ಮಾನ್ಯ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಗಳು ಗ್ರಾಂಟನ್ನು ಮಂಜೂರು ಮಾಡಿದ್ದಾರೆ. ಎಲ್ಲಿ ಜನತಾಪಕ್ಷದ ಸದಸರುಗಳು ಬಂದಿದ್ದಾರೆ ಅಂತಹ ಮುನಿಸಿಪಾಲಿಟಿಗಳಿಗೆ ಗ್ರಾಂಟನ್ನು ಕೊಟ್ಟಿಲ್ಲ. ಇದು ತಾರತಮ್ಯ ಮಾಡಿದಹಾಗೆ ಆಗಿದೆ. ಇವತ್ತು ಜನತಾಪಕ್ಷ ಮತ್ತು ಕಾಂಗ್ರೆಸ್-ಐ ಪಕ್ಷ ಎಂದು ಗ್ರಾಂಟನ್ನು ಕೊಡುವಾಗ ಸರ್ಕಾರ ಬೇರೆ ಬೇರೆ ಮಾಡಿ ತಾರತಮ್ಯ ಮಾಡಿರತಕ್ಕಂಥಾದ್ದು ಅನ್ಯಾಯ. ಇದು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಆಡಳಿತ ನಿರ್ವಹಿಸುತ್ತಾ ಇರತಕ್ಕಂಥ ಶ್ರೀಮಾನ್ ಶ್ರೀಕಂಠಯ್ಯನವರ ಮನೆ ದಡ್ಡಲ್ಲಿ, ಇದು ಕರ್ನಾಟಕ ರಾಜ್ಯ ಸರ್ಕಾರದ ದುಡ್ಡು. ಈ ಸರ್ಕಾರದ ದುಡ್ಡನ್ನು ಗ್ರಾಂಟಾಗಿ ಪಂಚತಕ್ಕ ಕಾಲದಲ್ಲಿ ಇವರು ಪ್ರತಿಯೊಂದು ಪುರಸಭೆಗೂ ಈಕ್ವಲ್ಲಾಗಿ ಕೊಡಬೇಕಾಗಿತ್ತು. ಆದರ ಕ್ಷೇತ್ರದಲ್ಲಿರತಕ್ಕಂಥ ಬಂದು ಸಣ್ಣ ಮುನಿಸಿಪಾಲಿಟಿಗೆ ಎರಡೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಇನ್ನೊಂದು ಮುನಿಸಿಪಾಲಿಟಿಗೆ ೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕೆಲವು ಕಡೆ ಬಹಳ ಕಡಿಮೆ ಹಣ ಕೊಟ್ಟಿದ್ದಾರೆ. ಜನತಾಪಕ್ಷದ ಸದಸ್ಯರು ಜಾಸ್ತಿಯಿರಬಂದಿರತಕ್ಕಂಥ ಮುನಿಸಿಪಾಲಿಟಿಗಳಿಗೆ ಒಂದು ಕಾಸು ಹಣವನ್ನು ಮಂಜೂರುಮಾಡಿಲ್ಲ. ಇದು ಬಹಳ ಅನ್ಯಾಯವಾಗಿದೆ. ಇದನ್ನು ನಾನು ಪ್ರತಿಭಟಿಸುತ್ತೆನೆ. ಈ ತಾರತಮ್ಯವನ್ನು ಹೋಗಲಾಡಿಸುವುದಕ್ಕಾಗಿ ಯಾವ ಮುನಿಸಿಪಾಲಿಟಿಗಳಿಗೆ ಗ್ರಾಂಟನ್ನು ಕೊಟ್ಟಿಲ್ಲವೋ ಅಂತಹ ಮುನಿಸಿಪಾಟಿಗಳಿಗೆ ಈಕ್ವಲ್ಲಾಗಿ ಗ್ರಾಂಟನ್ನು ಕೊಡಬೇಕು, ಈ ಸಭೆಯಲ್ಲಿ ಕೊಡುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಬೇಕು ಎಂದು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಗಳನ್ನು ಒತ್ತಾಯಮಾಡುತ್ತೇನೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

†SRI H. C. SRIKANTAIAH.—Madam Deputy Speaker, I may be permitted to make the following statement.

There was a provision of Rs. 200.00 lakhs under development grants to the municipalities under the head "284 Urban Development Grants" provided in the budget for 1978-79. Proposals from all the Divisional Commissioners were called for by Government and the proposals received were examined in detail and were referred to the Finance Department for its concurrence. As the

proposals received from the Divisional Commissioners were incomplete and not covered the various Municipalities which are badly affected, a meeting was convened in the Chambers of the Minister for Municipal Administration with the Officers of Karnataka Urban Water Supply and Drainage Board, Deputy Secretary, HUD Department, and the Deputy Secretary Finance Department. Subsequently a joint meeting was convened in the chambers of the Finance Minister wherein the Commissioner, Finance Dept. Commissioner, HUD Department and the Officers of Karnataka Urban Water Supply and Drainage Board and the concerned Deputy Secretaries of Finance Dept. and HUD Department were present. In this meeting. a decision has been taken on the following points-

(i) to release Rs. 200.00 lakhs in the Budget for the year 1978-79

(ii) The Managing Director, Karnataka Urban Water Supply and Drainage Board brought to the notice in the meeting that there has been scarcity of water in the various Town Municipal Councils where population is less than 20,000 and also City Municipal Councils where population exceeded beyond 20,000, where the City Municipal Councils and Town Municipal Councils credited 10% of the contribution and the Town Municipal Councils and City Municipal Councils were not in a position to take up the works due to the increase in the cost of estimates. It was suggested that Water Supply should be tackled on toppriority basis under the ongoing schemes, thereby, the two Dy. Secretaries of HUD Deptt. and the Deputy Secretary of Finance Department were requested to prepare a list of such TMCs and CMCs and submit the same to the Minister for Municipal Administration and Finance Minister for approval. Accordingly statements of the TMCs and CMCs from the proposal received from the various DVCs and DCs were prepared and submitted for the approval of Finance Minister and Minister for Municipal Administration. Accordingly the G.O. was put up by the HUD Department inconsultation with the Dy Secretary (Housing). HUD Department for which the concurrenc of the Finance Department has been obtained and necessary G.Os has been issued after obtaining the approval ofthe Hon. Chief Minister. grants have been made after taking all consideration for water supply if there is any scarcity and development works. A sum of Rs. 17.5 lakhs has been sanctioned to Hassan District in respect of the following Municipalities for water supply and development schemes which includes Belur.

ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಬೇಲೂರು ಶಾಸಕ ಮಿತ್ರರಾದಂಥ ಶ್ರೀಮಾನ್ ಲಕ್ಷ್ಮಣಯ್ಯನವರು ಒಂದೇ ನಿಯಮದ ಮೇರೆಗೆ ಕಳಿಸಿರತಕ್ಕ ಸೂಚನೆಮೇಲೆ ಮಾತನಾಡುತ್ತಾ ಕಾಂಗ್ರೆಸ್-ಐ ಪಕ್ಷದ ಶಾಸಕರು ಇರತಕ್ಕಂಥ ಪುರಸಭೆಗಳಿಗೆ ಮಂತ್ರಿಗಳು ಹಣವನ್ನು ಕೊಟ್ಟಿದ್ದಾರೆ, ಬೇರೆ ಪಕ್ಷ ಇರತಕ್ಕಂಥ

ಮುನಿಸಿಪಾಲಿಟಿಗಳಿಗೆ ಹಣವನ್ನು ಮಂಜೂರುಮಾಡಿಲ್ಲ ಎನ್ನತಕ್ಕಂಥ ಆಪಾದನೆಯನ್ನು ಮಾಡಿದರು. ಅವರು ಆ ಒಂದು ದೃಷ್ಟಿಯಲ್ಲಿ ನೋಡಿದರೆ ಆ ರೀತಿ ಅವರಿಗೆ ಕಾಣಿಸುತ್ತದೆ. ಫೈನಾನ್ಸ್ ಮಿನಿಸ್ಟರ್ ನಾನು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಸಭೆಯನ್ನು ಕರೆದು ಈ ಹಣವನ್ನು ಯಾವರೀತಿ ಹಂಚಬೇಕು ಯಾವ ಯಾವ ಮುನಿಸಿಪಾಲಿಟಿಗಳಿಗೆ ಮೊದಲನೆ ಪ್ರಿಯಾರಿಟಿ ಕೊಡಬೇಕು, ಕುಡಿಯುವ ನೀರಿಗೆ ಅಭಾವ ಇರತಕ್ಕಂಥಾ ಕಡೆ ಹಣವನ್ನು ಮೊದಲು ಕೊಡಬೇಕು, ಸಂಬಂಧಪಟ್ಟ ಡೆಪ್ಯುಟಿ ಕಮಿಷನರ್‌ರವರು ಇದನ್ನು ಖರ್ಚುಮಾಡತಕ್ಕಂಥಾದ್ದು ಎನ್ನತಕ್ಕಂಥ ಆದೇಶವನ್ನು ಕೊಟ್ಟು, ಡಿವಿಜನಲ್ ಕಮಿಷನರ್, ಡೆಪ್ಯುಟಿ ಕಮಿಷನರ್ ಕಳಿಸಿರತಕ್ಕ ಏನು ಒಂದು ಪ್ರಪೋಸಲ್ಸ್ ಇದೆ ಅದನ್ನು ಸಂಬಂಧಪಟ್ಟ ಅಧಿಕಾರಿಗಳು ಪೂರ್ಣವಾಗಿ ವಿಮರ್ಶೆಮಾಡಿ ನಮ್ಮ ಗಮನಕ್ಕೆ ತಂದು ಈ ಹಣವನ್ನು ಹಂಚತಕ್ಕಂಥ ಒಂದು ವಿಧಾನವನ್ನು ನಾವು ಅನುಸರಿಸಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಹೊಳೆನರಸೀಪುರದಲ್ಲಿ ಕುಡಿಯುವ ನೀರಿನ ಅಭಾವ ಇಲ್ಲ. ಈಗಾಗಲೇ ಸರ್ಕಾರ ಅಲ್ಲಿ ೨೦ ಲಕ್ಷ ರೂಪಾಯಿಗಳ ಕುಡಿಯುವ ನೀರಿನ ಸರಬರಾಜು ಯೋಜನೆಯನ್ನು ಮಂಜೂರು ಮಾಡಿದೆ, ಅಲ್ಲಿರತಕ್ಕ ನಾಗರೀಕರು ಆ ಒಂದು ಸೌಲಭ್ಯವನ್ನು ಪಡೆಯುತ್ತಾ ಇದ್ದಾರೆ.

೪-೩೦ ಪಿ. ಎಂ.

ಮತ್ತೆ ಬೇಲೂರಿನಲ್ಲಿ ಈಗಾಗಲೇ ಸುಮಾರು ೧೧ ಲಕ್ಷ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡಿದೆ. ಸೆಕೆಂಡ್ ಸ್ಟೇಜ್ ಡ್ರಿಂಕಿಂಗ್ ವಾಟರ್ ಸ್ಕೀಂಗೆ. ಇಷ್ಟು ಹಣವನ್ನು ಕೊಟ್ಟು ಖರ್ಚು ಮಾಡಲಾಗಿದೆ ; ಇದೇ ರೀತಿ ಅರಕಲಗೂಡಿಗೆ ಸಹ ನಾಲ್ಕುವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀವೆ. ಇನ್ನೊಂದು ೮ ಲಕ್ಷ ರೂಪಾಯಿಗಳನ್ನು ಸರ್ಕಾರ ಮಂಜೂರು ಮಾಡಿದೆ, ಅಡ್ಮಿನಿಸ್ಟ್ರೇಷನ್ ಟೆಕ್ನಿಕಲ್ ಸ್ಯಾಂಕ್ಷನ್‌ಗೆ ಕೊಟ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಈ ರೀತಿ ಒಟ್ಟು ೨೦೦ ಲಕ್ಷ ರೂಪಾಯಿಗಳನ್ನು ಹಂಚಿರತಕ್ಕದ್ದು ಎಲ್ಲೆಲ್ಲಿ ಯಾವಯಾವ ಪುರಸಭೆಗಳಲ್ಲಿ ಕುಡಿಯುವ ನೀರಿನ ಅಭಾವವಿದೆಯೋ ಅಂಥಾ ಕಡಗಳಿಗೆ ತಕ್ಷಣ ಪರಿಹಾರ ಮಾಡಬೇಕು ಎನ್ನತಕ್ಕ ಆದೇಶವನ್ನು ಕೊಟ್ಟು ಸಚಿವಾರು ೧ ಕೋಟಿ ೫೦ ಲಕ್ಷ ರೂಪಾಯಿಗಳನ್ನು ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ಗೆ ಹಣವನ್ನು ವರ್ಗಾವಣೆ ಮಾಡಿದ್ದೇವೆ. ಮತ್ತೆ ಚನ್ನರಾಯಪಟ್ಟಣ ಬಗ್ಗೆ ಆಪಾದನೆ ಮಾಡಿದರು ಆದರೆ ಚನ್ನರಾಯಪಟ್ಟಣಕ್ಕೂ ಕೂಡ ಕುಡಿಯುವ ನೀರನ್ನು ಮಂಜೂರು ಮಾಡಿದೆ ಮಂಜೂರು ಮಾಡಿ ಅಲ್ಲಿ ಕೂಡ ಕೆಲಸವಾಗಿದೆ. ಅಲ್ಲಿಗೆ ಸುಮಾರು ೫ ಲಕ್ಷ ರೂಪಾಯಿಗಳನ್ನು ಅಲ್ಲಿಡಿಸ್ಟ್ರಿಬ್ಯೂಷನ್ ಪ್ಲಾಂಟ್ ಮತ್ತು ಸ್ಕುವರೇಜ್ ಪ್ಲಾಂಟ್‌ಗೆ ಹಣ ಖರ್ಚು ಮಾಡತಕ್ಕ ಒಂದು ಸ್ಕೀಂ ಇದ್ದುದರಿಂದುಆದಕ್ಕೆ ಹಣವನ್ನು ಮಂಜೂರು ಮಾಡಿದೆಯೇ ಹೊರತು ಇನ್ನು ಯಾವ ದೃಷ್ಟಿಯಿಂದಲೂ ಅಲ್ಲ. ಮತ್ತೆ ಶ್ರವಣ ಬೆಳಗೋಳದಲ್ಲಿ ೧೯೮೧ರ ಹೊತ್ತಿಗೆ ಮಹಾಮಸ್ತಕಾಭಿಷೇಕ ಜರಗುತ್ತಿರುವುದರಿಂದ ಅಲ್ಲಿ ನೀರಿನ ವ್ಯವಸ್ಥೆ ಸರಿಯಾಗಿಲ್ಲದೇ ಇರುವುದರಿಂದ ಅಷ್ಟು ಹೊತ್ತಿಗೆ ಆದನ್ನು ಸರಿಪಡಿಸಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದೇವೆಯೇ ಹೊರತು ಮತ್ತೆ ಇನ್ನು ಯಾವುದೇ ಪಕ್ಷದ ದೃಷ್ಟಿಯಿಂದ ಭೇದಭಾವನೆಯಿಂದ ಮಾಡಿಲ್ಲ. ಇವತ್ತು ಬೇರೆ ಪಕ್ಷಗಳು ಇರತಕ್ಕ ಪುರಸಭೆಗಳಿಗೂ ಸಹ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟಿದ್ದೇವೆ ಆದನ್ನು ಮಾನ್ಯ ಸದಸ್ಯರು ನೋಡಬಹುದು. ಪ್ರಾಮುಖ್ಯವಾಗಿ ಕುಡಿಯುವ ನೀರಿನ ಅಭಾವವನ್ನು ನೀಗಬೇಕು, ಎಲ್ಲೆಲ್ಲಿ ಬೇಸಿಗೆಯಲ್ಲಿ ತೊಂದರೆಯಾಗುತ್ತದೆ ಅಂಥಾ ಕಡೆಗಳಲ್ಲಿ ಹಣವನ್ನು ಖರ್ಚು ಮಾಡಬೇಕು ಎನ್ನತಕ್ಕದ್ದೇ ನಮ್ಮ ಮೂಲ ಉದ್ದೇಶವಾಗಿದೆಯಷ್ಟೆ. ಈಗ ಪ್ರಾಮುಖ್ಯವಾಗಿ ಹಣವನ್ನು ಕೊಟ್ಟಿರತಕ್ಕದ್ದು ಕುಡಿಯುವ ನೀರಿನ ಸೌಲಭ್ಯಗೋಸ್ಕರವಾಗಿ. ಅದಕ್ಕೆ ತಕ್ಷಣ ಆ ಅಭಾವವನ್ನು ನೀಗಿಸುವುದಕೋಸ್ಕರವಾಗಿ ಕೊಟ್ಟಿದ್ದೇವೆ. ಮಾನ್ಯ ದೇವೇಗೌಡರವರು ಬುದ್ಧಿವಹಿಸಿ ಮೊದಲೇ ಕುಡಿಯುವ ನೀರಿನ ಯೋಜನೆ ಹಾಕಿಸಿ ಸರ್ಕಾರದ ಕಡೆಯಿಂದ ಮಾಡಿಸಿಕೊಂಡಿದ್ದಾರೆ, ಅರಕಲಗೂಡು ತಾಲ್ಲೂಕಿಗೆ ಶ್ರೀ ನಂಜೇಗೌಡರು ಹಾಕಿಸಿಕೊಂಡು ಬಿಟ್ಟಿದ್ದಾರೆ. ಬೇಲೂರು ತಾಲ್ಲೂಕಿಗೆ ತಕ್ಷಣ ಜೀಕು ಎಂಬುದನ್ನು ಅರಿತೇ ಕೊಟ್ಟಿದ್ದೇವೆ. ಬರೀ ಪಕ್ಷ ಒಂದನ್ನೇ ಆಧಾರವಾಗಿಟ್ಟುಕೊಂಡು ಮಾಡಿಲ್ಲ, ಮಾನ್ಯ ಸದಸ್ಯರಾದ ಶ್ರೀ ದೇವೇಗೌಡರು, ಲಕ್ಷ್ಮಣಯ್ಯನವರು ಇದ್ದಾರೆ ಮತ್ತು ಮಲ್ಲಿಪ್ಪನವರು ಇದ್ದಾರೆ ಎನ್ನತಕ್ಕ ದೃಷ್ಟಿಯಿಂದ ತಾರತಮ್ಯವನ್ನು ಖಂಡಿತವಾಗಿಯೂ ಮಾಡಿಲ್ಲ. ಇದನ್ನು ನಾನು ಮತ್ತು ಹಣ ಕಾಸಿನ ಮಂತ್ರಿಗಳಿವರೂ ಇಬ್ಬರೂ ಕುಳಿತು ಲೀಸ್ಟ್‌ನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಹಣವನ್ನು ಬಿಡುಗಡೆ ಮಾಡಿದ್ದೇವೆಯೇ ಹೊರತು, ಇನ್ನು ಯಾವುದೇ ದೃಷ್ಟಿಯಿಂದಲೂ ಅಲ್ಲ. ಇವತ್ತು ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ ನಮ್ಮ ಪಕ್ಷದವರು ಇಲ್ಲ ಅಲ್ಲಿಗೂ ೨ ಲಕ್ಷ ರೂಪಾಯಿಗಳನ್ನು ಕೊಟ್ಟಿ

ದ್ದೇವೆ. ಇದೇ ರೀತಿ ಅನೇಕ ಪುರಸಭೆಗಳಿಗೆ ಕೊಟ್ಟಿದ್ದೇವೆ. ಇದನ್ನು ಏತಕ್ಕೆ ಮಾಡಿದ್ದೇವೆ ಎಂದರೆ ಕುಡಿಯುವ ನೀರಿನ ಆಭಾವವನ್ನು ತಪ್ಪಿಸುವುದಕೋಸ್ಕರವಾಗಿ ಮಾಡಿದ್ದೇವೆಯೇ ಹೊರತು ಇನ್ನು ಯಾವುದೇ ತಾರತಮ್ಯಂದಿಲೂ ಆಲ್ಲ ಎನ್ನತಕ್ಕ ಅಂಶವನ್ನು ಮಾನ್ಯ ಸದಸ್ಯರು ಗಳ ಗಮನಕ್ಕೆತರಬಯಸುತ್ತಿದ್ದೇನೆ. ಮತ್ತೆ ಪುನ: ಪರಿಶೀಲನ ಮಾಡಿ ಪುರಸಭೆಗಳಿಗೆ ಹಣವನ್ನು ಕೊಡ ಬೇಕೆಂದು ಹೇಳಿದರು ಆದನ್ನು ಸಹ ಪರಿಶೀಲನೆ ಮಾಡಿಈಗಾಗಲೇ ಮುಖ್ಯಮಂತ್ರಿಗಳು ಸಹ ನನಗೆ ಕಾಗದ ಬರೆದಿದ್ದಾರೆ. ಮಾನ್ಯ ದೇವೇಗೌಡವರು ಪತ್ರ ಬರೆದು ಈ ರೀತಿ ಪುರಸಭೆಗಳಿಗೆ ಹಣವನ್ನು ಕೊಟ್ಟಿಲ್ಲ ಆದನ್ನು ಪುನರ ಪರಿಶೀಲನೆ ಮಾಡಿ ಎನ್ನತಕ್ಕ ಅಂಶವನ್ನು ತಿಳಿಸಿದ್ದಾರೆ ಆದುದರಿಂದ ಅದನ್ನೂ ಪರಿಶೀ ಲನೆ ಮಾಡಿ ಯಾವ ಮುನಿಸಿಪಾಲಿಟಿಗಳಿಗೆ ಹಣವನ್ನು ಕೊಡಬೇಕೋ ಅದನ್ನು ಈ ವರ್ಷ ಕೊಡುವು ದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಣೀಯವರೇ ಮಾನ್ಯ ಮಂತ್ರಿಗಳವರು ಕೊಟ್ಟ ವಿವರಣೆಯನ್ನು ನಾನು ಅವಲೋಕನೆ ಮಾಡಿದ್ದೇನೆ. ಮೊದಲು ಅವರ ಚೇಂಬರ್ಸ್‌ನಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಜೊತೆಗೆ ಚರ್ಚೆಯಾದ ಮೇಲೆ ಫೈನಾನ್ಸ್ ಮಿನಿಸ್ಟರ್ ಜೊತೆಗೆ ಜಂಟಿ ಸಭೆ ನಡೆಸಿ ರಿಲೀಜ್ ಮಾಡಿದ್ದೇವೆಂದು ಹೇಳಿದರು. ಆದಕ್ಕೆ ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ ನನಗೆ ಒಂದೆ ರಡು ವಿವರಣೆಯನ್ನು ತಾವು ದಯವಾಡಿ ಒದಗಿಸಿಕೊಡಬೇಕು. ಯಾವ ದಿವಸ ಡಿವಿಜನಲ್ ಕಮೀ ಷನರ್‌ರವರು ಮತ್ತು ಡೆಪ್ಯುಟಿ ಕಮೀಷನರ್ ರವರು ರಿಪೋರ್ಟ್ ಕಳುಹಿಸಿದ್ದಾರೆ? ಯಾವತ್ತು ಬಂತು? ಯಾವ ಉದ್ದೇಶಕ್ಕಾಗಿ ಹಣವನ್ನು ಕಳುಹಿಸಬೇಕೆಂದು ಅವರು ತಮ್ಮ ರಿಪೋರ್ಟ್‌ನಲ್ಲಿ ಬರೆದಿದ್ದಾರೆ? ನಮಗೆ ದಯಮಾಡಿ ಆ ವಿವರಣೆಯನ್ನೆಲ್ಲಾ ಅವರು ಕೊಡಬೇಕು. ಹಣವನ್ನು ಯಾವ ದಿವಸ ಟೆಲಿ ಗ್ರಾಂ ಮೇಲೆಬಿಡುಗಡೆ ಮಾಡಿದರು? ಯಾವ ರೀತಿಯಾಗಿ ಅಡ್ಜಸ್ಟ್ ಮಾಡಿದರು ಎಂಬುದನ್ನೆಲ್ಲಾ ದಯಮಾಡಿ ತಿಳಿಸಬೇಕು. ಕುಡ್ಲೂರು ಮುನಿಸಿಪಾಲಿಟಿಯಲ್ಲಿ ಕುಡಿಯಲು ನೀರೇ ಇಲ್ಲ ಅದನ್ನೆಲ್ಲ ಆ ಮೇಲೆ ಭಾಷಣ ಮಾಡುವಾಗ ಕೇಳುತ್ತೇನೆ. ಈಗ ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ, ನಿಮ್ಮ ಚೇಂಬರ್ಸ್‌ನಲ್ಲಿ ಏನು ಮೀಟಿಂಗ್ ನಡೆಯಿತು ಆಗ ಏನೊಂದು ಗೈಡ್‌ಲೈನ್ಸ್ ಹಾಕಿಕೊಂಡಿದ್ದೀರಿ? ಫೈನಾನ್ಸ್ ಮಿನಿಸ್ಟರ್‌ರವರ್ಚೇಂಬರ್‌ನಲ್ಲಿ ಮೀಟಿಂಗ್ ನಡೆದ ಮೇಲೆ ಹಣವನ್ನು ಯಾವ ಯಾವ ಪರ್‌ಪಸ್ ಗೋಸ್ಕರವಾಗಿ ರಿಲೀಜ್ ಮಾಡಿದಿರಿ ವಾಟರ್ ಗೋಸ್ಕರವಾಗಿ ರಿಲೀಜ್ ಮಾಡಿದಿರೋ ಇಲ್ಲ ಆಸ್ಫಾಲ್ ಟಿಂಗ್‌ಗೋಸ್ಕರವಾಗಿ ರಿಲೀಜ್ ಮಾಡಿದೀರೋ ಎಂಬುದರ ಬಗ್ಗೆ ದಯಮಾಡಿ ನನಗೆ ವಿವರಣೆ ಕೊಡ ಬೇಕು.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ —ಮಾನ್ಯ ಅಧ್ಯಕ್ಷಣೀಯವರೇ, ನಮ್ಮ ಮುನಿಸಿಪಲ್ ಅಡ್ಮಿನಿಸ್ಟ್ರೇ ಷನ್ ಮಿನಿಸ್ಟರ್‌ರವರು ನಮ್ಮ ಡಿಸ್ಟ್ರಿಕ್ಟ್‌ನವರೇ. ಅವರು ಹೇಳಿದ್ದನ್ನೆಲ್ಲಾ ಬಹಳ ನಿಗಾ ಇಟ್ಟು ಕೇಳಿದೆ. ಈಗ ನಮ್ಮ ಹಾಸನ ಜಿಲ್ಲೆಯಲ್ಲಿ ಅರಕಲಗೂಡು ತಾಲ್ಲೂಕಿನ ಬಗ್ಗೆ ಅವರು ಏನು ಹೇಳಿದರು ಎಂದರೆ ಈಗಾಗಲೇ ಸುಮಾರು ನಾಲ್ಕುವರೆ ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿಗೋಸ್ಕರವಾಗಿ ಉಪಯೋಗಿಸಿದ್ದೇವೆ ಮತ್ತು ಇನ್ನು ೮ ಲಕ್ಷ ರೂಪಾಯಿಗಳು ಸ್ಯಾಂಕ್ಷನ್ ಆಗಿದೆ ಆದನ್ನು ಮುಂದೆ ಮಾಡುತ್ತೇವೆ ಅಂತ ಹೇಳಿದರು. ನಿಜವಾಗಿಯೂ ಹೇಳುವುದಾದರೆ ಅವರು ನಾಲ್ಕುವರೆ ಲಕ್ಷ ರೂಪಾಯಿ ಗಳನ್ನು ಸರ್ಕಾರದವರೇ ಏನೂ ಖರ್ಚು ಮಾಡಿಲ್ಲ, ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಮಂತ್ರಿಗಳಾಗಿದ್ದಾಗಲೀ ಯಾವ ಒಂದು ಮುನಿಸಿಪಾಲಿಟಿಯಲ್ಲಿ ವರಮಾನ ಕಡಿಮೆ ಇರುತ್ತದೆಯೋ ಅಂಥ ಕಡೆಗೆ ೫ ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡುವ ಸ್ಕೀಂ ಮಾಡಿದ್ದರು ಅದು ಅರ್ಧಂಭರ್ದವಾಗಿ ನಿಂತು ಹೋಯಿತು.

ಶ್ರೀ ಎಚ್. ಸಿ, ಶ್ರೀಕಂಠಯ್ಯ.—ಈಗ ಭಾಷಣ ಬೇಡಿ ಸ್ಪಷ್ಟೀಕರಣ ಕೇಳಿ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ.—ನಮ್ಮ ತಾಲ್ಲೂಕಿನಲ್ಲಿರುವ ೩ ಮುನಿಸಿಪಾಲಿಟಿಗಳ ವರಮಾನ ಇತರೇ ಮುನಿಸಿಪಾಲಿಟಿಗಳಿಗಿಂತ ಬಹಳ ಕಡಿಮೆ ಇರತಕ್ಕಂಥದ್ದು. ಆಲ್ಲಿ ಸಾಮಾನ್ಯವಾಗಿ ಸಿಬ್ಬಂದಿ ವರ್ಗ ದವರಿಗೂ ಕೂಡ ಸಂಬಳ ಕೊಡುವುದಕ್ಕೆ ಶಕ್ತಿ ಇಲ್ಲದೇ ಇರತಕ್ಕಂಥ ಮುನಿಸಿಪಾಲಿಟಿಗಳು ಇವೆ, ಆದಾಯ ಇರತಕ್ಕಂಥವುಗಳಿಗೂ ಆದಾಯ ಇಲ್ಲದೇ ಇರತಕ್ಕಂಥ ಇತರೇ ಮುನಿಸಿಪಾಲಿಟಿಗಳಿಗೂ ಕೊಟ್ಟು ನಮ್ಮ ಮುನಿಸಿಪಾಲಿಟಿಗಳು ೩ ಏನಿವೆ ಅವಕ್ಕೆ ಮಾತ್ರ ತಾವು ಕೊಡುವುದೇ ಇರುವುದು ನೋಡಿದರೆ, ಇದರಿಂದ ನಮಗೆ ಅನುಮಾನ ಬರುವುದಕ್ಕೆ ಕಾರಣವಾಗಿದೆ ಇಲ್ಲಿ ಏನೋ ತಾರತಮ್ಯ ಮಾಡಿದ್ದೀರಿ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತಿದೆ. ನಮ್ಮ ಕೆಲವು ಮುನಿಸಿಪಾಲಿಟಿಗಳಲ್ಲಿ ಇರುವ ಜನರುಗಳಿಗೆ ಬೇಸಿಗೆ ಕಾಲ

ದಲ್ಲಿ ೨-೩ ತಿಂಗಳವರೆಗೆ ಕುಡಿಯುವುದಕ್ಕೂ ನೀರು ಸಿಗುವುದಿಲ್ಲ ಅವರು ಪಕ್ಕದ ತೋರೆಗಳಿಗೋ, ಹಳ್ಳಿಗಳಿಗೋ ೨-೩ ಮೈಲಿಯವರೆಗೆ ಬಿಂದಿಗೆಗಳನ್ನು ತೆಗೆದುಕೊಂಡು ಹೋಗಿ ನೀರನ್ನು ಹಿಡಿದುಕೊಂಡು ಬಂದು ಜೀವನ ಸಾಗಿಸುತ್ತಿದ್ದಾರೆ. ಇಂಥಾ ಪರಿಸ್ಥಿತಿ ಇರುವಾಗ ನಮ್ಮ ತಾಲ್ಲೂಕಿನ ಈ ೩ ಮುನಿಸಿಪಾಲಿಟಿಗಳು ಬಿಟ್ಟಿರುವುದನ್ನು ನೋಡಿಯೇ ನಮಗೆ ತಾವು ತಾರತಮ್ಯ ಮಾಡಿದ್ದೀರಿ ಎಂಬುದು ಗೊತ್ತಾಗುತ್ತದೆ. ತಾವು ಸಹ ಎಷ್ಟೋ ಸಾರಿ ನಮ್ಮ ತಾಲ್ಲೂಕಿಗೆ ಬಂದಿದ್ದೀರಿ ಅಲ್ಲಿಯ ಜನರ ಕಷ್ಟವನ್ನು ಅರಿತಿದ್ದೀರಿ. ನಿಮ್ಮ ಮೇಲೆ ನಮಗೆ ಅಭಿಮಾನವಿದೆ, ನಮ್ಮ ಮೇಲೆ ನಿಮಗೆ ಅಭಿಮಾನವಿದ್ದರೂ ಕೂಡ ಈ ತರಹ ತಾರತಮ್ಯ ಮಾಡಿರುವುದನ್ನು ನೋಡಿದರೆ ಯಾವುದೋ ಪಕ್ಷದ ಭೇದಭಾವನೆ ಇಟ್ಟುಕೊಂಡು ಮಾಡಿರುವ ಹಾಗೆ ಕಾಣುತ್ತಿವೆ. ಆದುದರಿಂದ ಮಾನ್ಯ ಶ್ರೀ ದೇವೇಗೌಡರವರು ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಮಾನ್ಯ ಮಂತ್ರಿಗಳವರು ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಈಗ ಮಾನ್ಯ ದೇವೇಗೌಡರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಡೆಪ್ಯೂಟಿ ಕಮೀಷನರ್ ಏನು ರೆಕಮೆಂಡ್ ಮಾಡಿದ್ದಾರೆ. ಡಿವಿಜನಲ್ ಕಮೀಷನರ್ ಏನು ರೆಕಮೆಂಡ್ ಮಾಡಿದ್ದಾರೆ, ಯಾವುದಕ್ಕೆ ಕೊಟ್ಟಿದ್ದೀರಿ, ಯಾವಾಗ ಕ್ರೆಡಿಟ್ ಆಯಿತು ಎಂದು ಕೇಳಿದ್ದಾರೆ. ಸ್ಯಾಂಕ್ಷನ್ ಮಾಡಿ ಆಯಾಯ ಮುನಿಸಿಪಾಲಿಟಿಗಳಿಗೆ ಕ್ರೆಡಿಟ್ ಮಾಡಿರುವುದರಿಂದ ಕೊಡತಕ್ಕದ್ದು ಏನು ಕಷ್ಟವಾಗುವುದಿಲ್ಲ. ಮಾನ್ಯ ಮಲ್ಲಪ್ಪನವರು ಕೋಣನೂರು ಮುನಿಸಿಪಾಲಿಟಿಯಲ್ಲಿ ಕುಡಿಯುವ ನೀರಿನ ತೊಂದರೆ ಇದೆ, ಅದನ್ನು ಈವರೆಗೆ ಪರ್ಯಾಲೋಚನೆ ಮಾಡಿಲ್ಲ ಎಂದು ಈಗ ನನ್ನ ಗಮನಕ್ಕೆ ತಂದಿದ್ದಾರೆ. ಅದನ್ನು ಖಂಡಿತ ಆದಷ್ಟು ಬೇಗ ಪರಿಹರಿಸಕೊಡುತ್ತೇನೆ.

SRI H. D. DEVE GOWDA.—If the procedure has been properly followed by the Government before releasing the grant, then I have no objection. If the D.C. of the concerned district has recommended and asked the Government to release the money, then the Minister is well within his limits to release the money, I want to know when the meeting was held after the report was received first in the Minister's chamber and then when the joint meeting was held with the Finance Minister, when the G.O. was issued so that I can form my own opinion as to whether the Minister has shown discrimination or not.

SRI H.C. SRIKANTAIAH.—That can be done; we had a meeting in the last week of March. The details will be given,

SRI H.D. DEVEGOWDA.—The very idea of raising this issue under rule 312 is to elicit information. I do not want any discussion from tomorrow from regular demands will be taken up by this House for consideration. When we take up the demands for discussion and give our final approval, we have to express our views. We know how to tackle this issue. This is not the personel funds of any individual. ನಮಗೆ ಇನ್‌ಫಾರಮೇಷನ್ ಕೊಡದೆ ಹೋದರೆ ಸ್ವಲ್ಪ ಇಕ್ಕಟ್ಟಾಗುತ್ತದೆ, ಏನು ಮಾತನಾಡಬೇಕೆಂದು ಗೊತ್ತಾಗುವುದಿಲ್ಲ. ಜೊತೆಗೆ ೨೦೦ ಲಕ್ಷ ರೂಪಾಯಿಗಳನ್ನು ರಿಲೀಜ್ ಮಾಡಿದ್ದೇವೆಂದು ಹೇಳಿದರು. ನಮ್ಮ ರಾಜ್ಯದಲ್ಲಿ ಯಾವ ಯಾವ ಮುನಿಸಿಪಾಲಿಟಿಗಳಿಗೆ ಎಷ್ಟೆಷ್ಟು ರಿಲೀಸ್ ಮಾಡಿದ್ದಾರೆಂಬುದನ್ನು ತಿಳಿಸಬೇಕು. ಮತ್ತೊಮ್ಮೆ ಮಾನ್ಯ ಹಣಕಾಸಿನ ಸಚಿವರನ್ನು ಕೇಳಿಕೊಳ್ಳುತ್ತೇನೆ, ದಯಮಾಡಿ ಇನ್‌ಫಾರ್ಮೇಷನ್ ಒದಗಿಸಕೊಡಬೇಕು. ನಾವು ದಿನಕ್ಕೆ ೫೧ ರೂಪಾಯಿಗಳನ್ನು ತೆಗೆದುಕೊಂಡು ಇನ್‌ಫಾರ್ಮೇಷನ್ ಇಲ್ಲದೆ ಸುಮ್ಮನೆ ಕುಳಿತುಕೊಳ್ಳುವುದನ್ನು ಲೆಕ್ಕ ಹಾಕಬೇಕಾಗುತ್ತದೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸರ್ಕಾರಿ ಆಫೀಸ್ ಕೊಡುತ್ತೇವೆ, ತೆಗೆದುಕೊಳ್ಳಿ. I do not know why he has unnecessarily got himself enraged on this issue.

Sri S. M. YAHYA (Minister for Finance).—There is the Government order and the notification. It will be supplied to him.

ಶ್ರೀ ಹೆಚ್. ಎಸ್. ಶ್ರೀಕಂಠಯ್ಯ.—ಮಾನ್ಯ ಸದಸ್ಯರು ಉದ್ರೇಕವಾಗತಕ್ಕ ಪ್ರಮೇಯ ಏನು ಇಲ್ಲ. ಸರ್ಕಾರಿ ಆಜ್ಞೆಯನ್ನು ಕೊಡುತ್ತೇವೆ, ತೆಗೆದುಕೊಳ್ಳಲಿ.

SRI H.D. DEVEGOWDA. —It is his duty to supply the information.

SRI H.C. SRIKANTAIAH.—That will be supplied.

SRI H.D. DEVEGOWDA.—Tomorrow we are going to mands for discussion. What stand I should take I must decide. Unless I get this information I cannot do so.

SRI H.C. SRIKANTAIAH.—It has got certain norms. It is left to discretion of the Government. Government has sanctioned and that order will be given to him.

SRI H.D. DEVEGOWDA.—If the Minister is prepared to send all this information before the demands are taken up tomorrow I have no objection. I want to know when the report was submitted by the D.C., for how many municipalities he has recommended, when the Divisional Commissioner has recommended, when the meeting was held in the Hon. Minister's Chamber, when the joint meeting was held, when the Chief Minister approved and when the amount was transferred by telegram.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಮಾನ್ಯ ದೇವೇಗೌಡರು ಪುನಃ ಪುನಃ ಹೇಳಿದ್ದನ್ನೇ ಹೇಳುತ್ತಿದ್ದಾರೆ ಯಾವಾಗ ಸ್ಯಾಂಕ್ಷನ್ ಮಾಡಿದರು, ಯಾವಾಗ ಮೀಟಿಂಗ್ ಮಾಡಿದರು ಎಂದು ೨-೩ ಸಾರಿ ಕೇಳಿದ್ದಾರೆ. ಅದಕ್ಕೆ ನಾನು ಇನ್‌ಫಾರ್ಮೇಷನ್ ಕೊಡುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ನಾಳೆ ಒಂದು ಗಂಟೆಯೊಳಗೆ ದಯಮಾಡಿ ಕೊಡಿಸಿ: ಏಕೆಂದರೆ ನಾಳೆಯೇ ಡಿಮ್ಯಾಂಡ್ ಪ್ರಾರಂಭ ಆಗುತ್ತದೆ. ಅಷ್ಟರೊಳಗೆ ನಾವು ಒಂದು ತೀರ್ಮಾನ ತೆಗೆದುಕೊಳ್ಳ ಬೇಕಾಗುತ್ತದೆ. Whether I should extend my co-operation and what stand I should take will depend upon this information. This information is available in the Secretariat.

SRI H.C. SRIKANTAIAH.—It will be given immediately. Tomorrow or the day after tomorrow he will get the information.

SRI H.D. DEVEGOWDA.—Before one O'Clock tomorrow he can give this information.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ನಮ್ಮ ಡಿಮ್ಯಾಂಡ್ ಬರುವುದಕ್ಕೆ ಮುಂಚೆಯೇ ಅವರಿಗೆ ಕಳುಹಿಸಿಕೊಡುತ್ತೇವೆ.

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಉಪಸಭಾಧ್ಯಕ್ಷೆಯವರೇ, ತಮಗೆ ಒಂದು ಕಾಗದವನ್ನು ಬರೆದಿದ್ದೇನೆ. ತಮಗೆ ಅಂದರೆ ತಮ್ಮ ಕಾರ್ಯಾಲಯಕ್ಕೆ, ಅಂದರೆ ಮಾನ್ಯ ಸಭಾಧ್ಯಕ್ಷರಿಗೆ ಅಡ್ರೆಸ್ ಮಾಡಿದ್ದೇನೆ. ಅದರಲ್ಲಿ ನಾನು ಕೆಲವು ವಿಷಯಗಳನ್ನು ಸಮೂದಿಸಿದ್ದೇನೆ, ಇವತ್ತಿನ ದಿವಸ ಸರ್ಕಾರ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳುವುದರ ಬಗ್ಗೆ ಹಾಗೂ ಕೆಲವು ವಿಷಯಗಳಿಗೆ ಹಣ ಕೊಡುವುದರ ಬಗ್ಗೆ ಹೇಗೆ ಡಿಸ್ಕ್ರಿಮಿನೇಟ್ ಮಾಡುತ್ತಿದೆ ಎಂಬುದರ ಬಗ್ಗೆ ತಮಗೆ ಒಂದು ಪತ್ರವನ್ನು ಬರೆದಿದ್ದೇನೆ.

ಆದರಲ್ಲಿ ಎಲ್ಲವನ್ನು ವಿವರವಾಗಿ ನಮೂದಿಸಿದ್ದೇನೆ. ಬೇಡಿಕೆಗಳ ಮೇಲೆ ಚರ್ಚೆಯನ್ನು ಪ್ರಾರಂಭಿಸುವುದಕ್ಕೆ ಮುಂಚೆ ಆ ಬಗ್ಗೆ ನಿರ್ಣಯವಾಗಿದ್ದರೆ ನಮ್ಮ ನಿಲುವು ಏನು ಎಂಬುದನ್ನು ತಿಳಿಸಿದ್ದೇನೆ. ಆದುರಿಂದ, ಈ ವಿಷಯವನ್ನು ರೂಲ್ ೫೧೨ರ ಕೆಳಗೆ ಎತ್ತಬೇಕೆಂದು ಒಂದು ವಾರದ ಹಿಂದೆ ನೋಟೀಸ್ ಕೊಟ್ಟಿದ್ದೆ. ಇಲಾಖೆಗಳ ಬೇಡಿಕೆಗಳನ್ನು ಪ್ರಾರಂಭಿಸುವುದಕ್ಕೆ ಮುಂಚೆ ನಾನು ಆ ವಿಷಯದ ಬಗ್ಗೆ ಚರ್ಚೆ ಮಾಡಬೇಕೆಂದು ತಿಳಿಸಿದ್ದೇನೆ. ತಮ್ಮ ಕಾರ್ಯಾಲಯಕ್ಕೆ ಸಾರಿ ಸಾರಿ ಹೇಳಿದ್ದೇನೆ; ಮತ್ತು ಇವತ್ತಿನ ದಿವಸ ಆ ವಿಷಯವನ್ನು ಎತ್ತಿದ್ದೇನೆ. ನಾಳೆಯಿಂದ ಎಲ್ಲ ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭವಾಗುತ್ತದೆ. ಹಲವಾರು ವಿಷಯಗಳ ಬಗ್ಗೆ ತಮಗೆ ಪತ್ರ ಮುಖೇನ ತಿಳಿಸಿದ್ದೇನೆ. ಮಾನ್ಯ ಮಂತ್ರಿಗಳಿಗೆ ಕೂಡ ಹೇಳಿದ್ದೇನೆ. ಗ್ರಾಂಟ್ ಕೊಡದಿದ್ದರು ಚಿಂತೆ ಇಲ್ಲ; ೧೦ ವರ್ಷ ಸಫರ್ ಆಗಬಹುದು. ಆದರೆ it is my responsibility to bring to the notice of the people of the State how things are going on in the Constituencies of the Opposition Parties. ನಿಮ್ಮದು ಒಂದೇ ಡಿಪಾರ್ಟ್‌ಮೆಂಟ್ ಬಗ್ಗೆ ಬರುವುದಿಲ್ಲ; ಇತರ ಡಿಪಾರ್ಟ್‌ಮೆಂಟ್‌ಗಳ ಬಗ್ಗೆ ಬರುತ್ತದೆ. ಆದರ ಬಗ್ಗೆ ಈಗ ಚಿಂತೆ ಮಾಡ ಬೇಕಾಗಿಲ್ಲ. ಅದರ ಬಗ್ಗೆ ಮಾನ್ಯ ಅಧ್ಯಕ್ಷರವರಿಗೆ ನಾನು ಒಂದು ಪತ್ರವನ್ನು ಬರೆದಿದ್ದೇನೆ. ಈವಿಷಯದ ಬಗ್ಗೆ ನಾವು ಒಂದು ಅಂತಿಮ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಯವರು ನಾಳೆ ಒಂದು ಗಂಟೆಯೊಳಗಾಗಿ ಅದರ ಬಗ್ಗೆ ಮಾಹಿತಿಯನ್ನು ನಮಗೆ ಕೊಟ್ಟರೆ ಸಾಕು.

ಶ್ರೀ ಕೆ.ಹೆಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ನಾನು ಒಂದು ಸಣ್ಣ ಕ್ಲಾರಿಫಿಕೇಷನ್ ಕೇಳಿಬಿಡುತ್ತೇನೆ. ಮಾನ್ಯ ದೇವೇಗೌಡರು ಕಳೆದ ೧೫ ವರ್ಷಗಳಿಂದ ನಮ್ಮ ಜಿಲ್ಲೆಯ ಶಾಸಕರಾಗಿದ್ದಾರೆ. ಅವರು ಹಿಂದೆ ವಿರೋಧ ಪಕ್ಷದ ನಾಯಕರಾಗಿ ಮಾನ್ಯ ಪಿ.ಡಬ್ಲ್ಯೂ.ಡಿ. ಮಂತ್ರಿಯವರಲ್ಲಿ ಮತ್ತು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ವಿಶ್ವಾಸ ಇಟ್ಟು ಅನೇಕ ಕೆಲಸಕಾರ್ಯಗಳನ್ನು ಮಾಡಿಸಿದ್ದಾರೆ. ಈಗ ಮಾನ್ಯ ಮಂತ್ರಿಯವರು ಹಾಸನ ಜಿಲ್ಲೆಯಲ್ಲಿ ಯಾವಯಾವ ಕಾನ್‌ಸ್ಟಿಟ್ಯೂಷನ್‌ನಲ್ಲಿ ಎಷ್ಟೆಷ್ಟು ಕೆಲಸಕಾರ್ಯಗಳು ಆಗಿವೆ ಎಂಬ ಬಗ್ಗೆ ಮಾಹಿತಿಯನ್ನು ಕೊಡಬೇಕು.

SRI H. D. DEVEGOWDA.—I Welcome that. I have no objection ನಿಜವಾಗಿ ಮಾನ್ಯ ಮಂತ್ರಿಯವರು ಎಲ್ಲಕ್ಕೂ ಇನ್‌ಫರ್‌ಮೇಷನ್ ಅನ್ನು ಒದಗಿಸಿಕೊಡುವುದಾದರೆ ಅವರಿಗೆ ನಾನು ಧನ್ಯನಾಗಿರುತ್ತೇನೆ. ನಾನು ಕೇಳಿರುವ ಮಾಹಿತಿಗಳನ್ನೂ ಸಹ ನಾಳೆ ಒದಗಿಸಿಕೊಟ್ಟರೆ ಬಹಳ ಸಂತೋಷ. ಏಕೆಂದರೆ ಆದರ ಬಗ್ಗೆ ನಾಳೆ ಚರ್ಚೆಯಾಗಬೇಕು. ಮಾನ್ಯ ಮಂತ್ರಿಯವರು ಎಲ್ಲಾ ಇನ್‌ಫರ್‌ಮೇಷನ್‌ಗಳನ್ನು ಒದಗಿಸಿದಮೇಲೆ ಮಾನ್ಯ ಹನುಮೇಗೌಡರು ಅವರ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೂ ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಯವರು ಸರಿಯಾದ ಉತ್ತರವನ್ನು ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ.—ಸ್ವಾಮಿ, ಮಾನ್ಯ ಸಚಿವರು ಉತ್ತರ ಕೊಡುತ್ತಾ ಎಲ್ಲೆಲ್ಲಿ ಕೆಲಸಗಳು ಆಗಬೇಕಾಗಿದೆಯೋ, ಅಧಿಕಾರಿಗಳು ಎಲ್ಲೆಲ್ಲಿ ಆಗತ್ಯವಾದ ಕೆಲಸಗಳು ನಡೆಯಬೇಕು ಎಂದು ಒಂದು ರಿಪೋರ್ಟ್ ಕೊಟ್ಟಿದ್ದಾರೆಯೋ ಅಂತಹಕಡೆ ನಾವು ಹಣವನ್ನು ಕೊಟ್ಟಿದ್ದೇವೆ, ಬಾಕಿ ಕಡೆ ಕುಡಿಯುವ ನೀರಿನ ಸಮಸ್ಯೆ ಏನು ಇಲ್ಲ. ಎಂದು ಹೇಳಿದರು. ಮತ್ತೆ ಶ್ರೀಮಾನ್ ಮಲ್ಲಪ್ಪನವರ ಪ್ರಶ್ನೆಗೆ 'ಕೊಣನೂರಿನ ಮುನಿಸಿಪಲ್ ಏರಿಯಾದಲ್ಲಿ ಕುಡಿಯುವ ನೀರಿನ ತೊಂದರೆ ಇರತಕ್ಕಂಥಾದ್ದು ನನಗೆ ಗೊತ್ತಿರಲಿಲ್ಲ, ಮಾನ್ಯ ಸದಸ್ಯರು ಹೇಳಿದಮೇಲೆ ನನಗೆ ಗೊತ್ತಾಗಿದೆ; ಈ ಬಗ್ಗೆ ಮುಂದೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದರು. ಆ ರೀತಿ ಹೇಳಿ ಅವರು ಈ ಸಭೆಯನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಹಾಸನ ಜಿಲ್ಲೆಯಲ್ಲಿ ಯಾವಯಾವ ಮುನಿಸಿಪಾಲಿಟಿಗಳಿಗೆ ಅಗತ್ಯವಾಗಿ ಹಣ ಬೇಕು ಎಂದು ಅಧಿಕಾರಿಗಳು ಒಂದು ನೋಟ್ ಕಳಿಸಿದ್ದಾರೆ ಅದರ ಪ್ರಕಾರ ಹಣ ಹಂಚಿದ್ದಾರೆಂದು ಅವರು ಹೇಳಿದ್ದಾರೆ. .....

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅಧಿಕಾರಿಗಳು ಕಳಿಸಿದ ರಿಪೋರ್ಟನ್ನು ಪರಿಶೀಲನೆ ಮಾಡಿ ಮತ್ತು ಶಾಸಕರು ಹೇಳಿರತಕ್ಕಂಥ ವಿಚಾರಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಅದನ್ನು ನಾವು ಮಾಡಿದ್ದೇವೆ, ಕೇವಲ ಅಧಿಕಾರಿಗಳ ರಿಪೋರ್ಟ್ ಪ್ರಕಾರ ಆ ಕೆಲಸವನ್ನು ಮಾಡಿದ್ದೇವೆ ಎಂದು ನಾನು ಹೇಳಿಲ್ಲ. ಕೆಲವು ಕಡೆಗಳಿಂದ ವರದಿ ಬಂದಿರಬಹುದು, ಬರದೇ ಇರಬಹುದು ಅಲ್ಲಿಗೂ ನಾವು ಕೊಟ್ಟಿದ್ದೇವೆ,

SRI H.D, DEVEGOWDA.—Sir he is trying to amend his own state ment, He read out a statement and said that a decision was taken in the Minister's chamber. All that has gone into the proceedings. Now he is trying to shift his stand. He said that in some cases even without references from the officers he has given.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸ್ವಾಮಿ, ನಾನು ಹೇಳುವುದು ಅವರಿಗೆ ಅರ್ಥವಾಗುತ್ತಾ ಇಲ್ಲ. If he speaks so technically it is very difficult. ನಾನು ಹೇಳುವುದೇನೆಂದರೆ ಈ ಬಗ್ಗೆ ನಾನು ಅಧಿಕಾರಿಗಳ ವರದಿಯನ್ನು ಪರಿಶೀಲನೆ, ಮಾಡಿದ್ದೇನೆ.ಶಾಸಕರ ಮನವಿಯನ್ನೂ ಪರಿಶೀಲನೆ ಮಾಡಿದ್ದೇನೆ; ಅಲ್ಲದೇ ಅಲ್ಲಿಗೆ ನಾನೇ ವೈಯಕ್ತಿಕವಾಗಿ ಪ್ರವಾಸ ಹೋದಾಗ ಆ ಮುನಿಸಿಪಾಲಿಟಿಗಳ ಪ್ರೆಸಿಡೆಂಟ್‌ಗಳು ನನಗೆ ಕೊಟ್ಟಂತಹ ಮನವಿಯನ್ನು ಸಹ ನಾನು ಪರಿಶೀಲನೆ ಮಾಡಿದ್ದೇನೆ. ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡಿನವರೂ ಸಹ ಯಾವಯಾವ ಪುರಸಭೆಗಳಲ್ಲಿ ನೀರಿನ ತೊಂದರೆ ಇದೆ ಎಂಬುದನ್ನು ಹೇಳಿದ್ದಾರೆ. ಇದೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ನಾವು ಮಾಡಿದ್ದೇವೆ ಎಂದು ಹೇಳಿದ್ದೇನೆಯೇ ಹೊರತು ಕೇವಲ ಡೆಪ್ಯುಟಿ ಕಮೀಷನರ್ ರೆಕಮೆಂಡೇಷನ್ ಮಾಡಿರುವ ಮುನಿಸಿಪಾಲಿಟಿಗಳಿಗೆ ಮಾತ್ರ ಕೊಟ್ಟಿದ್ದೇವೆಂದು ನಾನು ಹೇಳಲಿಲ್ಲ. ಇದರಲ್ಲಿ ಒಂದು ಕ್ರಮವನ್ನು ಅನುಸರಿಸಿ ನಾವು ಮಾಡಿದ್ದೇವೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಸ್ವಾಮಿ, ಮಾನ್ಯ ಮಂತ್ರಿಯವರು ಡೆಪ್ಯುಟಿ ಕಮೀಷನರ್‌ರವರ ಶಿಫಾರಸ್ಸಿನ ಮೇಲೆ, ಅಧಿಕಾರಿಗಳ ಶಿಪಾರಸ್ಸಿನ ಮೇಲೆ ಯಾರ್ಯಾರು ಅರ್ಜಿ ಕೊಟ್ಟಿದ್ದರೋ ಅದರ ಆಧಾರದ ಮೇಲೆ ಅವನ್ನೆಲ್ಲಾ ಪರಿಶೀಲನೆ ಮಾಡಿ ಇದನ್ನು ಮಾಡಿದ್ದೇವೆ ಎಂದು ಹೇಳಿದರು. ಬಹುಷಃ ಇದು ಕರ್ನಾಟಕ ರಾಜ್ಯದಲ್ಲಿ ಒಂದು ಹೊಸ ಸಂಪ್ರದಾಯ ಎಂದು ಕಾಣುತ್ತದೆ. ಬಹುಷಃ ದಾರಿಯಲ್ಲಿ ಹೋಗುವವರು ಅರ್ಜಿ ಕೊಟ್ಟರೂ ಅದನ್ನು ಮಾಡಿಕೊಡುತ್ತಾರೆಂದು ಕಾಣುತ್ತದೆ. ಅದು ಮಾನ್ಯ ಶ್ರೀಕಂಠಯ್ಯನವರ ಸ್ವಂತ ಹಣ ಎಂದು ಕಾಣುತ್ತದೆ, ಅದು ಕರ್ನಾಟಕರಾಜ್ಯದ ಹಣ ಅಲ್ಲ. ಹಣ ಕೊಡಬೇಕಾದರೂ ಯಾವರೀತಿ ಕೊಡಬೇಕೆಂಬ ಬಗ್ಗೆ ಒಂದು ನಿಯಮ ಇದೆ. ಈಗ ಹಾಸನ ನಗರದಲ್ಲಿ ಜನರು ನೀರಿಗಾಗಿ ಭವಣೆ ಪಡುತ್ತಿದ್ದಾರೆ. ಹಾಸನ ನಗರಕ್ಕೆ ತಾವು ಎಷ್ಟು ಹಣವನ್ನು ಮಂಜೂರು ಮಾಡಿದ್ದೀರಿ ? ಅವರ ನೀರಿನ ಆಗತ್ಯವನ್ನು ಪೂರೈಸುವುದಕ್ಕೆ ಎಷ್ಟು ಹಣ ಬೇಕಾಗುತ್ತದೆ ? ಚನ್ನರಾಯಪಟ್ಟಣಕ್ಕೆ ಅದರ ಆಗತ್ಯ ನೋಡಿಕೊಂಡು ೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಅವರು ಹೇಳಿದ್ದಾರೆ, ಬಹಳ ಸಂತೋಷ. ಈಗ ಸಕಲೇಶಪುರಕ್ಕೆ ನೀರಿನ ಅಭಾವ ಇದೆಯೇ ? ಆಲೂರಿನಲ್ಲಿ ನೀರಿನ ಅಭಾವ ಇದೆಯೇ ? ಇವೆಲ್ಲಕ್ಕೂ ಯಾವ ವ್ಯವಸ್ಥೆ ಮಾಡಿದ್ದೀರಿ ಎಂಬುದನ್ನು ಮಾನ್ಯ ಮಂತ್ರಿಯವರು ಹೇಳಬೇಕು.

ಶ್ರೀ ಜೆ. ಡಿ. ಸೋಮಪ್ಪ.—ಸ್ವಾಮಿ, ಆಲೂರಿನಲ್ಲಿ ಕುಡಿಯುವ ನೀರು ಇರಲಿಲ್ಲ. ಈ ಬಗ್ಗೆ ಅಲ್ಲಿಯ ಮುನಿಸಿಪಾಲಿಟಿ ಪ್ರೆಸಿಡೆಂಟ್‌ರವರು ಮಾನ್ಯಮಂತ್ರಿಯವರಲ್ಲಿ ಅರಿಕೆ ಮಾಡಿಕೊಂಡಮೇಲೆ, ಅಲ್ಲಿಗೆ ಬಂದು ಪರಿಶೀಲನೆ ನಡೆಸಿದ ಮೇಲೆ ಆಲೂರಿಗೂ ಕೊಟ್ಟಿದ್ದಾರೆ. ಇದನ್ನು ತಾವು ತಿಳಿದು ಕೊಳ್ಳಬೇಕು.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗಳಿಗೆ ಮಾಹಿತಿ ಕೊಡುತ್ತೀರಾ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನಾಳೆ ದಿವಸ ಎಲ್ಲಾ ಮಾಹಿತಿಯನ್ನು ಅವರಿಗೆ ಕಳಿಸಿಕೊಡುತ್ತೇನೆ.

MADAM DEPUTY SPEAKER.—The Minister has promised to give all information tomorrow. ಈ ಬಗ್ಗೆ ಮತ್ತೆ ಏನನ್ನೂ ಮಾತನಾಡುವುದು ಬೇಡ.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ಈ ರೂಲ್ ೫೧೨ರ ಕೆಳಗೆ ಎತ್ತಿರತಕ್ಕಂಥ ಈ ವಿಷಯವನ್ನು ನಾವು ಪಂಕ್ತಾಯ ಮಾಡಿದ್ದೇವೆ. ಈ ಬಗ್ಗೆ ಮಾನ್ಯ ಮಂತ್ರಿಯವರು ನಾಳೆ ವಿವರಣೆ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆಂದು ತಾವು ಹೇಳಿದ್ದೀರಿ. ಅವರು ಹಾಸನಕ್ಕೆ ೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ಇನ್ನೂ ೧೫ ಲಕ್ಷ ರೂಪಾಯಿ ಕೊಡಲಿ ನಾನು ಬೇಡ ಎಂದು ಹೇಳುವುದಿಲ್ಲ. ಅಲ್ಲಿ ಅವಶ್ಯಕತೆ ಇದೆ ಎಂಬುದನ್ನು ಯಾರು ತೀರ್ಮಾನ ಮಾಡಬೇಕು ? ಇಲ್ಲಿ ನೀರಿನ ಅಭಾವವಿದೆ, ಇಲ್ಲಿ ರಸ್ತೆ ಚೆನ್ನಾಗಿಲ್ಲ. ಇದಕ್ಕೆಲ್ಲ ಹಣ ಬೇಕು ಎಂದು ಒಬ್ಬ ಅಧಿಕಾರಿ ಹೇಳಬೇಕು. ನಾವೂ ನೀವೂ ಸಂಬಳ ಕೊಟ್ಟು ಅದಕ್ಕಾಗಿಯೇ ಅಧಿಕಾರಿಗಳನ್ನು ಇಟ್ಟಿದ್ದೇವೆ.

೫-೦೦ ಪಿ. ಎಂ.

ಶ್ರೀ ಎಚ್. ಸಿ. ಶ್ರೀ ಕಂಠಯ್ಯ.—ಅಧಿಕಾರಿಗಳು ಹೇಳಿದರೆ ಮಾತ್ರ ಮಾಡಬೇಕು, ಇಲ್ಲದಿದ್ದರೆ ಮಾಡಬಾರದೆಂದು ತಾವು ಹೇಳುತ್ತಿರುವುದರ ಅರ್ಥವಾಗುತ್ತದೆ. ಮಂತ್ರಿಯಾಗಿ ನನಗೆ ನನ್ನದೇ ಆದ ಡಿಸ್ಕ್ರಿಷನ್ ಉಂಟು.

ಶ್ರೀ ಹೆಚ್. ಡಿ. ದೇವೆಗೌಡ.—ಅದರ ಬಗ್ಗೆ ಚರ್ಚೆ ಬೇಡ. ೧೮ ಆಲ್ಲ ೧೮೦ ಲಕ್ಷ ಹಂಚಿ, ನಾವು ಬೇಡ ಎನ್ನುವುದಿಲ್ಲ. ಆದರೆ, ಬೇರೆ ಕಡೆ ಯಾವ ಪರಿಸ್ಥಿತಿ ಇದೆ ಎನ್ನುವುದನ್ನೂ ಸಹ ನಾಳೆ ಚರ್ಚೆ ಮಾಡೋಣ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆಗಬಹುದು.

ಶ್ರೀ ಮೈಕಲ್ ಬಿ. ಫರ್ನಾಂಡೀಸ್.—ಮಾನ್ಯ ಉಪಾಧ್ಯಕ್ಷರೇ, ಸುಮಾರು ಏಳು ಸಾವಿರ ಜನ ಕೆಲಸ ಮಾಡುವ ಮೈಕೋ ಕಾರ್ಖಾನೆ ಕಳೆದ ಮೂರು ದಿವಸಗಳಿಂದ ಲಾಕ್‌ಔಟ್ ಆಗಿದೆ. ಇದರ ಬಗ್ಗೆ ಚರ್ಚೆ ಮಾಡಲು ನಾವು ಸೂಚನೆಯನ್ನು ಕಳುಹಿಸಿದ್ದೆವು. ಆದರೆ, ಇಂದಿನ ಕಾರ್ಯಕಲಾಪ ಪಟ್ಟಿಯಲ್ಲಿ ಈ ವಿಷಯ ಕಾಣಿಸುತ್ತಿಲ್ಲ. ಅಲ್ಲಿ ಕಾರ್ಮಿಕರು ಬಹಳ ಟೆನ್‌ಷನ್‌ನಲ್ಲಿದ್ದಾರೆ.

MADAM DEPUTY SPEAKER.—Yesterday the Hon'ble Chief Minister stated that the conciliation proceedings are going on, and therefore they could not do anything. The hon. member may raise it after two days.

SRI MICHAEL B. FERNANDES.—There are 7,000 workers under the lock-out. We would like to discuss it even before the conciliation ends.

MADAM DEPUTY SPEAKER.—Let us see.

PAPERS LAID ON THE TABLE.

SRI S. M. YAHYA (Minister for Finance).—I beg to lay :—

" 1) Finance Accounts 1977-78.

2) Appropriation Accounts 1977-78.

3) Report of the Comptroller and Auditor General of India for the year 1977-78, Government of Karnataka (Civil) as required under article 151 (2) of the Constitution of India. "

MADAM DEPUTY SPEAKER.— The Papers are laid.

Karnataka Entertainment Tax (Amendment) Bill, 1979. Message from the Governor

MADAM DEPUTY SPEAKER.—I have received a message from the Governor which is as follows :—

" In pursuance of clause (1) of Article 207 of the Constitution of India, I, Govind Narain, Governor of Karnataka, do hereby recommend that the Karnataka Entertainments Tax (Amendment) Bill, 1979 be introduced in the Karnataka Legislative Assembly."